# ಖಾದಿ ಕಾಟನ್ ಸಿಲ್ಕ್ ನೀರೆಯರಿಗೆ ಮೋಹಕ ಸೀರೆ

**ಖಾದಿ ಕಾಟನ್ ಸಿಲ್ಕ್ ಸೀರೆ ಜನಪ್ರಿಯತೆಯ ಹಾದಿ ಹಿಡಿದಿದೆ. ರೇಷ್ಮೆ ಸೀರೆಗಿಂತಲೂ ಹಗುರವಾಗಿರುವ, ರಿಚ್ ಲುಕ್ ಕೊಡುವ ಖಾದಿ ಸಿಲ್ಕ್ ಸೀರೆಗೆ ಯುವತಿಯರು ಮೊರೆಹೋಗಿದ್ದಾರೆ.**

**■ ಉಮಾ ವೇಣೂರು**



'ಈಗೀಗ ರೇಷ್ಮೆ ಸೀರೆಗಿಂತಲೂ ಖಾದಿ ಕಾಟನ್ ಸಿಲ್ಕ್ ಸೀರೆಗೇ ಹೆಚ್ಚು ಬೇಡಿಕೆ' ಎನ್ನುತ್ತಲೇ ಖಾದಿ ಸಿಲ್ಕ್ ಸೀರೆಯ ವೈಶಿಷ್ಟ್ಯವನ್ನು ವಿವರಿಸುತ್ತಾ ಹೋದರು ಖಾದಿ ಉಡುಪು ಡಿಸೈನರ್ ಬೆಂಗಳೂರಿನ ಜಯನಗರದಲ್ಲಿರುವ ಜ್ಯೋತಿ ಶೆಟ್ಟಿ. ಕಳೆದ 25 ವರ್ಷಗಳಿಂದ ಖಾದಿ ಉಡುಪು ವಿನ್ಯಾಸ ಮಾಡುವ ಜ್ಯೋತಿ ಅವರಿಗೆ ಯುವತಿಯರ ಸೀರೆ ಆಸಕ್ತಿಯನ್ನು ಪೋಷಿಸಿ ಹೊಸ ಹೊಸ ವಿನ್ಯಾಸದ ಉಡುಗೆಯನ್ನು ಜನಪ್ರಿಯಗೊಳಿಸುವ ತವಕ.

'ಉದ್ಯೋಗಸ್ಥರಿಗೆ, ಯುವತಿಯರಿಗೆ ಸಾಂಪ್ರದಾಯಿಕ ಉಡುಪುಗಳನ್ನು ಧರಿಸುವುದೇ ಟ್ರೆಂಡ್ ಎನಿಸಿದೆ. ಖಾದಿ ಸಿಲ್ಕ್ ಸೀರೆ ಉಟ್ಟುಕೊಳ್ಳಲು ಹಬ್ಬ, ಮದುವೆಯಂತಹ ವಿಶೇಷ ದಿನಗಳೇ ಬರಬೇಕು ಎಂದೇನಿಲ್ಲ. ಯಾವಾಗ ಬೇಕಾದರೂ ಜರಿಯಂಚು, ಕುಚ್ಚು ನೇಯ್ದ ಸೆರಗಿನ ರೇಷ್ಮೆ ಸೀರೆಯ ಜೊತೆ ಡಿಸೈನರ್ ರವಿಕೆ ತೊಟ್ಟು, ಮ್ಯಾಚಿಂಗ್ ಆಭರಣಗಳನ್ನು ಧರಿಸಿ ಸಂಭ್ರಮಿಸಲು ಯುವತಿಯರು ಇಷ್ಟಪಡುತ್ತಿದ್ದಾರೆ' ಎಂಬುದು ಅವರು ನೀಡುವ ವಿವರಣೆ.

'ಬೇಡಿಕೆಗೆ ತಕ್ಕಂತೆ ಮೈಸೂರು ಸಿಲ್ಕ್, ಪಟೋಲ, ಮಹೇಶ್ವರಿ, ಪೈಠಣಿ, ಬನಾರಸ್, ಕಾಂಜೀವರಂ, ಪೋಚಂಪಲ್ಲಿ, ಜಾಮ್ದಾನಿ, ಕಥಾನ್, ಟಸ್ಸಾರ್, ಚಂದೇರಿ, ಬಾಲುಶಾರಿ, ಧರ್ಮಾವರಂ, ಗದ್ವಾಲ್, ಭಾಗಲ್ಪುರಿ, ಉಪ್ಪಡ, ಮಟ್ಕಾ... ಹೀಗೆಥರಾವರಿ ರೇಷ್ಮೆ ಸೀರೆಗಳು, ಡಿಸೈನರ್ ಸೀರೆಗಳು ಲಭ್ಯವಾದರೂ ಕಳೆದ ಕೆಲ ವರ್ಷಗಳಿಂದೀಚೆಗೆ ಖಾದಿ ಕಾಟನ್ ಸಿಲ್ಕ್ ಸೀರೆ ಮಹಿಳೆಯರ ಮೆಚ್ಚು ಆಗುತ್ತಿದೆ; ಮೋಹ ಹೆಚ್ಚುತ್ತಿದೆ' ಎಂಬುದು ಈ ವಿನ್ಯಾಸಕಿಯ ಅಂಬೋಣ.

ಖಾದಿ ಸಿಲ್ಕ್ ಸೀರೆ, ಖಾದಿ ಕಾಟನ್, ಖಾದಿ ಪ್ರಿಂಟೆಡ್ ಸಿಲ್ಕ್ ಸೀರೆ, ಖಾದಿ ಪಟ್ಟು.. ಹೀಗೆ ಸರಣಿಯಂತೆ ಸಿಗುವ ಖಾದಿ ಸೀರೆಗಳಲ್ಲದೆ ಇದರಲ್ಲೇ ಹಗುರವಾದ, ಮೆತ್ತನೆಯ 'ಖಾದಿ ಸಾಫ್ಟ್ ಸೀರೆ'ಗಳೂ ಈಗೀಗ ಹೆಚ್ಚು ಗಮನಸೆಳೆಯುತ್ತಿವೆ. ಇದಕ್ಕೆ ಕಾರಣ ಧರಿಸಲು ಸುಲಭ, ಆರಾಮದಾಯಕ ಮೇಲಾಗಿ ಇಂಥ ಸೀರೆಗಳು ನೀಡುವ ರಾಯಲ್ ಲುಕ್. ಇಂತಹ ಸೀರೆಗಳು ನಿತ್ಯ ಕಚೇರಿಗಳಿಗೆ ಹೋಗುವ ಮಹಿಳೆಯರಿಗೂ ಸೂಕ್ತ ಎನಿಸಿವೆ.

ಪ್ಲೈನ್ ಖಾದಿ ಸಿಲ್ಕ್ ಸೀರೆಗೆ ಡಿಸೈನರ್ ಬ್ಲೌಸ್ ಒಳ್ಳೆಯ ಕಾಂಬಿನೇಷನ್. ಇಂಥ ಸೀರೆಯ ಸೆರಗಿಗೆ ನಾಲ್ಕೈದು ಎಳೆ ಮಾಡುವ ಬದಲಾಗಿ ಒಂದೇ ಎಳೆಯಾಗಿ ಉಟ್ಟುಕೊಂಡರೆ ಸಖತ್ ಲುಕ್ ಕೊಡುತ್ತದೆ. ಸೀರೆಯ ಬಣ್ಣಕ್ಕೆ ಕಾಂಟ್ರಾಸ್ಟ್ ಆಗಿರುವ ಬಣ್ಣದ ಬ್ಲೌಸ್ ಧರಿಸಲೂಬಹುದು. ರವಿಕೆ ಹೈ ನೆಕ್ ಇದ್ದರೆ ಅಂದ ಹೆಚ್ಚು. ಅಲ್ಲದೆ ತುಂಬು ತೋಳಿನ ಬ್ಲೌಸ್ ಕೂಡ ಚೆನ್ನಾಗಿ ಒಪ್ಪುತ್ತದೆ. ಬ್ಲೌಸ್‌ನಲ್ಲಿ ಕುಂದನ್ ವರ್ಕ್, ಕುಸುರಿ ಇರುವ ಬ್ಲೌಸ್‌ಗಳೂ ಸೂಕ್ತವೇ.